

## ಕೆರೆ ಮಧ್ಯೆ ಪುರಾತನ ಬಸದಿ

ಕಾರ್ಕಳದಲ್ಲಿರುವ ಆನೆಕೆರೆಯ ಚತುರ್ಮುಖ ಬಸದಿಯು ಜೀರ್ಣೋದ್ಧಾರದ ಬಳಿಕ ವೈಭವದಿಂದ ಕಾಣುತ್ತಿದೆ. 1545ನೇ ಇಸ್ವಿಯ ಈ ಪುರಾತನ ಬಸದಿಯನ್ನು ಸಂಪೂರ್ಣ ಶಿಲಾಮಯವಾಗಿಸುವ ಕಾಯಕ 2 ವರ್ಷಗಳ ಹಿಂದೆ ಪೂರ್ಣಗೊಂಡು ಇದೀಗ ಇನ್ನಷ್ಟು ಆಕರ್ಷಣೆಯೊಂದಿಗೆ ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಕಾರ್ಕಳದ 18 ಜೈನ ಬಸದಿಗಳಲ್ಲೊಂದಾಗಿದ್ದು, ಇದನ್ನು ಭೈರವರಸರ ವಂಶಸ್ಥನಾದ ಪಾಂಡ್ಯನಾಥ ಪಾಂಡ್ಯಪ್ಪೊಡೆಯ ಕೆರೆಯ ಮಧ್ಯೆ ಕಟ್ಟಿಸಿದನೆಂಬ ಇತಿಹಾಸವಿದೆ. ಇದರ ಕೆರೆಯನ್ನು ಮೂಲತಃ 1262ರಲ್ಲಿ ದೊರೆ ಪಾಂಡ್ಯದೇವನು ಸಣ್ಣ ಹೊಂಡದ ರೂಪದಲ್ಲಿ ನಿರ್ಮಿಸಿದ್ದನೆನ್ನಲಾಗಿದೆ. ಬಳಿಕ ರಾಜನ ಆನೆಗಳಿಗೆ ನೀರು ಕುಡಿಸಲು/ಸ್ನಾನ ಮಾಡಿಸಲು ಆ ಹೊಂಡವನ್ನು 25 ಎಕರೆಯ ಕೆರೆಯಾಗಿಸಿ 'ಆನೆಕೆರೆ'ಯೆಂದು ಹೆಸರಿಸಲಾಯಿತು.

ಬಸದಿಯು ಕಾರ್ಕಳ ಪೇಟೆಯಿಂದ ಕೇವಲ 1 ಕಿ.ಮೀ. ದೂರದಲ್ಲಿದೆ. ಕೆರೆಯು ಈಗ 7 ಎಕರೆ ಜಾಗಕ್ಕೆ ಸೀಮಿತಗೊಂಡಿದ್ದು, ಸ್ಥಳೀಯರಿಗೆ ನೀರಿನ ಮೂಲವಾಗಿದೆ. ಹೊಯ್ಸಳ ಮತ್ತು ಗಂಗರ ಶೈಲಿಯಲ್ಲಿ ಬಸದಿ ನಿರ್ಮಿಸಲಾಗಿದೆ. ಗಜ/ಸಿಂಹ ಕಟಾಂಜನವಿರುವ ಕಲ್ಲಿನ ಕಂಬಗಳು ಮೂಲದಿಂದಲೇ ಇಲ್ಲಿವೆ. ಆದಿನಾಥ, ಚಂದ್ರನಾಥ, ಪಾರ್ಶ್ವನಾಥ, ಶಾಂತಿನಾಥ, ಮಹಾವೀರ ಸ್ವಾಮಿ ಹಾಗೂ ಚಕ್ರೇಶ್ವರಿ ಮತ್ತು ಪದ್ಮಾವತಿ ದೇವಿಯನ್ನು ಇಲ್ಲಿ ಪೂಜಿಸಲಾಗುತ್ತದೆ. ಈಚೆಗೆ ಈ ಕ್ಷೇತ್ರದಲ್ಲಿ ಸ್ಥಳಪ್ರಶ್ನೆ ನಡೆದಾಗ ತಿಳಿದು ಬಂದಂತೆ, ಮೇಲಂತಸ್ತಿನಲ್ಲಿದ್ದ ಕಾಣೆಯಾದ ಮೂರ್ತಿಗಳು ಮತ್ತು ಧರ್ಮದೇವತೆಗಳಿಗೆ ಸಮರ್ಪಕ ವ್ಯವಸ್ಥೆಯೊಂದಿಗೆ ಜೀರ್ಣೋದ್ಧಾರ/ಪುನರ್ ಪ್ರತಿಷ್ಠೆ ಕಾರ್ಯ ನೆರವೇರಿಸಲಾಯಿತು. ಜೊತೆಗೆ ಹಿಂದಿದ್ದ ಹೆಂಚಿನ ಛಾವಣಿಯ ಬದಲು ಮೂರಂತಸ್ತಿನ ಬಸದಿ ಸಂಪೂರ್ಣ ಶಿಲಾಮಯವಾಗಿ, ಗೋಡೆಗಳು ಸುಂದರ ಶಿಲ್ಪಕಲಾ ವಿನ್ಯಾಸಗಳಿಂದ ಅಲಂಕೃತಗೊಂಡು ಭಕ್ತರನ್ನು ಸೂಜಿಗಲ್ಲಿನಂತೆ ಸೆಳೆಯುತ್ತಿದೆ. ಸ್ವಚ್ಛಗೊಂಡ ಆನೆಕೆರೆಯ ಪ್ರವೇಶದ್ವಾರದಲ್ಲಿ ಮಕ್ಕಳ ಪಾರ್ಕ್, ರಸ್ತೆಯಂಚಲ್ಲಿ ಹಸಿರು ಉದ್ಯಾನವನ, ತಲುಪಲು ಹಾಸುಗಲ್ಲಿನ ಸೇತುವೆ ಮಾರ್ಗ ಇತ್ಯಾದಿಗಳೊಂದಿಗೆ ಇದೀಗ ಜನಾಕರ್ಷಣೆಯ ಕೇಂದ್ರವಾಗಿದೆ.

–ರಮಣ್ ಶೆಟ್ಟಿ ರೆಂಜಾಳ, ಮುಂಬೈ

## ಎಲೆ, ಕಾಳು, ಬೀಜಗಳಲ್ಲಿ ಅರಳಿದ ಕಲೆ

ಸೃಜನಶೀಲತೆ ಎಂದರೆ ಅಕ್ಷರಶಃ ಅಸ್ತಿತ್ವಕ್ಕೆ ತರುವುದು ಎಂದರ್ಥ. ಇದು ಬಹಳ ಸಂಕೀರ್ಣ ವಿಚಾರ. ನಮ್ಮ ಸುತ್ತಮುತ್ತಲಿನವರಲ್ಲಿ ಹೀಗೆ ಸಾಹಿತ್ಯ, ಕಲೆಯ ಮೂಲಕ ಕಲಾ ಕೌಶಲದ ನೈಪುಣ್ಯವು ಸಾಕಾರಗೊಂಡಾಗ ಅಚ್ಚರಿ ಮೂಡುತ್ತದೆ, ಮನವೂ ಮುದಗೊಳ್ಳುತ್ತದೆ. ಕೊಪ್ಪ ಅರಳಿಕಟ್ಟೆ ಶಕ್ತಿ ಗಣಪತಿಯ ದೀಪೋತ್ಸವದಲ್ಲಿ ವರ್ಣರಂಜಿತ ಚಿತ್ತಾರದ ಆರತಿ ತಟ್ಟೆಗಳಿದ್ದವು. ಅದರಲ್ಲಿ ಎಲ್ಲರ ಗಮನ ಸೆಳೆದದ್ದು ರಕ್ಷಾ ಲಕ್ಷ್ಮೀಶ ಅವರು ಎಲೆಗಳು, ಕಾಫಿ ಬೀಜಗಳು ಹಾಗೂ ಹೆಸರುಕಾಳುಗಳಿಂದ ಮೂಡಿಸಿದ ನವಿಲು, ಹೆಡೆ ಬಿಚ್ಚಿದ ಸರ್ಪದೊಂದಿಗಿರುವ ಶಿವಲಿಂಗದ ಆಕೃತಿಯುಳ್ಳ ಆರತಿ ತಟ್ಟೆಗಳು. ಕಲಾವಿದರೂ ತಲೆದೂಗಿದ ಈ ಆರತಿ ಕಲಾಕೃತಿಗಳಿಗೆ ಬಹುಮಾನವೂ ಸಿಕ್ಕಿತ್ತು.

–ಎಸ್.ಎನ್. ಚಂದ್ರಕಲಾ, ಕೊಪ್ಪ





## 'ಬನಶಂಕರಿ'ಗೆ ತರಕಾರಿ ಅಲಂಕಾರ

ಬಾದಾಮಿಯ ಆದಿಶಕ್ತಿ ಬನಶಂಕರಿದೇವಿ ಮೂರ್ತಿಗೆ, ರಥೋತ್ಸವದ ಹಿಂದಿನ ದಿನ 'ವನದುರ್ಗಾ ಹೋಮ'ವನ್ನು ಕೈಗೊಂಡು, 108 ತರಕಾರಿಗಳಿಂದ ಅಲಂಕಾರ ಮಾಡಲಾಯಿತು. ಇದನ್ನು 'ಪಲ್ಲೇದಹಬ್ಬ' ಎಂದು ಆರಾಧಿಸಲಾಯಿತು. ಹಿಂದೊಮ್ಮೆ ಭೀಕರ ಬರಗಾಲದಿಂದ ಈ ನಾಡಿನ ಜನರು, ಪಶುಪಕ್ಷಿ ಪ್ರಾಣಿಗಳು ನೀರು, ಆಹಾರವಿಲ್ಲದೆ ತತ್ತರಿಸಿದ್ದವು. ಭಕ್ತಸ್ತೋಮ ದೇವಿಗೆ ಮೊರೆ ಹೋದರು. ದೇವಿಯು ಕರುಣೆ ತೋರಿ ಮಳೆ ತರಿಸಿ, ತನ್ನ ತನುವಿನಿಂದ ತರಕಾರಿಗಳನ್ನು ಸೃಷ್ಟಿಸಿ ಸಂರಕ್ಷಿಸಿದಳೆಂದು ಸ್ಕಂದ ಪುರಾಣದಲ್ಲಿ ಉಲ್ಲೇಖಿಸಲಾಗಿದೆ. ತರಕಾರಿಯನ್ನು ಸೃಷ್ಟಿಸಿದ್ದರಿಂದ 'ಶಾಕಾಂಬರಿ' ಎಂದು ಕರೆಯುವರು. ಈ ಹಿನ್ನೆಲೆ ಜನಮಾನಸದಲ್ಲಿ ಯಾವತ್ತೂ ಉಳಿಯಲಿ ಎಂದು ಅರ್ಚಕರು ಪ್ರತಿ ವರ್ಷ ರಥೋತ್ಸವದ ಹಿಂದಿನ ದಿನ ದೇವಿಗೆ ತರಕಾರಿ ಅಲಂಕಾರ ಮಾಡುವರು.

–ಡಾ. ಕರವೀರಪ್ರಭು ಕ್ಯಾಲಕೊಂಡ, ಬಾದಾಮಿ